K.S.R.T.C. Buses in Gokak Depot

995. SRI L. S. NAIK (Gokak).—Will the Minister for Transport and Tourism be pleased to state:—

(*a*) the number of buses in K.S.R.T.C. depot at Gokak at present

(*b*) out of them, the number of new and old buses,

(*c*) the annual income from this Depot?

SRI R. GUNDU RAO (Minister for Transport and Tourism)—

(*a*) 39.

(*b*) New buses 9
Old buses which are fit for use ... 30

(*c*) Annual income for the year 1977-78 Rs. 90.59 lakhs.

Taking up some notices from Members

ಶ್ರೀ ಪೈ.ಪೇಲ್ ಬಿ. ಫರ್ನಾಂಡಿಸ್.—ಸ್ವಾಮಿ ನಾನು ಒಂದು ನಿಲುವಳಿಸೂಚನೆಯೆನ್ನು ಕೊಟ್ಟಿದ್ದೆ ಅದು ಏನಾಯಿತು ಎಂಬುದನ್ನು ಸ್ವಲ್ಪ ಹೇಳಬೇಕು.

ಅಧ್ಯಕ್ಷರು.—ಅದನ್ನು ಪರಿಶೀಲಿಸುತ್ತೇನೆ.

Hunger Strike by the workers of Devakarani Estate

ಶ್ರೀ ಎಸ್.ಎಸ್. ಅರಕೇರಿ.—ಸ್ವಾಮಿ ಸಾಧುಗಳ ದೇವಕರಾಣಿ ಎಸ್ಟೇಟ್ ಎಂದು ಇದೆ. ಅದು ೭೦೦ ಎಕರೆ ಜಮೀನು ಇದೆ ಇದಕ್ಕೆ ಸಂಬಂಧಪಟ್ಟ ೧೧೦ ಕಾರ್ಮಿಕರು ಉಪವಾಸ ಕುಳಿತುಕೊಂಡಿದ್ದಾರೆ. ಅವರ ಪರಿಸ್ಥಿತಿ ಬಹಳ ಉಲ್ಬಣವಾಗಿದೆ. ಇದರ ಬಗ್ಗೆ ಕೊಟ್ಟ ನೋಟೀಸ್ ಏನಾಯಿತು ಎಂಬುದನ್ನು ನೋಡಬೇಕು.

ಅಧ್ಯಕ್ಷರು.—ಆ ಬಗ್ಗೆ ನನಗೆ ಸಹಾನುಭೂತಿ ಇದೆ. ಅದನ್ನು ಚೆಕ್ ಅಪ್ ಮಾಡಿಸುತ್ತೇನೆ.

Rise in Water Rate for Sugarcane Growers

೨-೦೦ ಪಿ.ಎಂ.

ಶ್ರೀ ಎಂ. ಮಾದೇಗೌಡ.—ಸ್ವಾಮಿ, ಕಬ್ಬು ಬೆಳೆಗಾರರ ಮೇಲೆ ಸರ್ಕಾರದವರು ವಾಟರ್ ರೇಟ್ ಹಾಕಿರುವ ಬಗ್ಗೆ ಎರಡೂವರೆ ಗಂಟೆಗಳ ಕಾಲ ಚರ್ಚೆಗೆ ಅವಕಾಶ ಮಾಡಿಕೊಡ ಬೇಕೆಂದು ನಾವು ಕೆಲವು ಸದಸ್ಯರು ಒಂದು ನೋಟೀಸನ್ನು ಕಳುಹಿಸಿದ್ದೆವು.....

ಅಧ್ಯಕ್ಷರು.—ಇದರ ಮೇಲೆ ಸುಮಾರು ೨೦ ನಿಮಿಷಗಳ ವರೆಗೆ ಆ ದಿವಸ ಚರ್ಚೆಯಾಗಿ ಕೊನೆಗೆ ಮಾನ್ಯ ಮುಖ್ಯ ಮಂತ್ರಿಗಳು ತಮಗೆ ಉತ್ತರ ಕೊಟ್ಟಿದ್ದಾರೆ. ಇವತ್ತು ಮಾನ್ಯ ಮುಖ್ಯ ಮಂತ್ರಿಯವರು ಇಲ್ಲಿ ಇಲ್ಲದಿರುವುದರಿಂದ ಈ ದಿವಸ ನಾವು ಏನೂ ಮಾತನಾಡುವುದಕ್ಕಾಗುವುದಿಲ್ಲ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಯವರು ಬಂದಮೇಲೆ ತಾವು ಈ ವಿಷಯವನ್ನು ಎತ್ತಬಹುದು.

ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ, ಆ ದಿವಸ ಮುಖ್ಯ ಮಂತ್ರಿಯವರು ಏನು ಹೇಳಿಕೆ ಕೊಟ್ಟಿದ್ದರು ಅದಕ್ಕಿಂತಲೂ ಹೆಚ್ಚಿನ ತೆರಿಗೆಯನ್ನು ಸರ್ಕಾರದವರು ಹಾಕಿದ್ದಾರೆ. ಆದುದರಿಂದ ಈ ದಿವಸ ಅದರ ಬಗ್ಗೆ ಚರ್ಚೆಮಾಡಬೇಕಾಗಿತ್ತು. ಆದರೆ ಮಾನ್ಯ ಮುಖ್ಯ ಮಂತ್ರಿಯವರು ಈಗ ಸದನದಲ್ಲಿ ಇಲ್ಲದೇ ಇರುವುದರಿಂದ ನಾನು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ತಾವು ಕಲ್ಪಿಸಿಕೊಡಬೇಕು.

ಅಧ್ಯಕ್ಷರು.—ತಾವು ಅಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಬಹುದು. ಮಾನ್ಯ ಸದಸ್ಯರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಇಲ್ಲಿ ೨೨೪ ಜನ ಸದಸ್ಯರಿದ್ದು ಎಲ್ಲರೂ ಒಂದೊಂದು ಪ್ರಶ್ನೆ, ಕಾಲಿಂಗ್ ಅಟೆನ್‌ಷನ್ ನೋಟೀಸ್, ಮ್ಯಾಟರ್ ಅಂಡರ್ ೩೧೨ ಎಲ್ಲಾ ಕಳುಹಿಸಿದರೆ ಎಲ್ಲಕ್ಕೂ ಒಂದೇ ದಿವಸ ಉತ್ತರ ಕೊಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ನನ್ನ ಕಛೇರಿಗೆ ಬಂದು ವಿಷಯವನ್ನು ತಿಳಿಸಿದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಪಿ. ರಾಂದೇವ್.— ಸ್ವಾಮಿ, ನನ್ನದೊಂದು ಕ್ರಿಯಾಲೋಪ. ಈ ಸದನದಲ್ಲಿ ಒಬ್ಬರು ದೊಡ್ಡವರು, ಒಬ್ಬರು ಚಿಕ್ಕವರು ಎಂದು ಏನೂ ಇಲ್ಲ. ಎಲ್ಲರೂ ಒಂದೇ ಸಮ. ಇದು ತಮಗೂ ಗೊತ್ತಿದೆ. ಬೇರೆಯವರಿಗೆ ಈ ಶೂನ್ಯ ವೇಳೆಯಲ್ಲಿ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕೊಡುತ್ತೀರಿ. ಆದರೆ ನನಗೆ ಯಾವಾಗಲೂ ಅವಕಾಶವನ್ನೇ ಕೊಡುತ್ತಿಲ್ಲ.

ಅಧ್ಯಕ್ಷರು.—ತಾವು ತೆಗೆದುಕೊಂಡಷ್ಟು ಕಾಲಾವಕಾಶವನ್ನು ಈ ಕಡೆಯ ಸದಸ್ಯರೂ ಯಾರೂ ಕೂಡ ತೆಗೆದುಕೊಳ್ಳುವುದಿಲ್ಲ. ತಮ್ಮ ವಿಷಯ ಏನು ಎಂಬುದನ್ನು ನನ್ನ ಕಛೇರಿಗೆ ಬಂದು ತಿಳಿಸಿದರೆ ಒಳ್ಳೆಯದು.

Admissions of SC/ST Students for MBBS Seats

ಶ್ರೀ ಕೆ. ಯಂಕಟಪ್ಪ.—ಸ್ವಾಮಿ, ಮಾನ್ಯ ಸದಸ್ಯರಾದ ವೀರಪ್ಪ ಮೊಯಿಲಿಯವರೂ, ಮಾನ್ಯ ಜಿ. ಕೆ. ಸುಬ್ಬಯ್ಯನವರೂ, ನಾನೂ, ರೂಲ್ ೩೧೨ರ ಕೆಳಗೆ ಬಂದು ನೋಟೀಸ್‌ನ್ನು ತಮಗೆ ಕಳುಹಿಸಿದ್ದೇವೆ. ೧೯೭೮–೭೯ನೇ ಸಾಲಿಗೆ ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್.ನ ಮೊದಲನೇ ವರ್ಷಕ್ಕೆ ಸೀಟ್‌ಗಳನ್ನು ಕೊಡುವಾಗ ಹಿಂದುಳಿದ ವರ್ಗದವರಿಗೆ, ಪರಿಜನರಿಗೆ ಸಾಕಷ್ಟು ಪ್ರಮಾಣದಲ್ಲಿ ಕೊಡುತ್ತಿಲ್ಲ. ಈಗ ಸೀಟುಗಳೆಲ್ಲಾ ಮುಗಿಯುತ್ತಾ ಬಂದಿವೆ.....

ಅಧ್ಯಕ್ಷರು.—ತಾವು ವಿಷಯವನ್ನು ನನಗೆ ತಿಳಿಸದೇ ಇಲ್ಲಿ ಇದ್ದಕಿದ್ದಂತೆ ನಿಂತು ಮಾತನಾಡುವುದಾದರೆ ಸಭೆಯ ಕಾರ್ಯಕಲಾಪಗಳನ್ನು ಹೇಗೆ ನಡೆಸಬೇಕು. ತಮ್ಮ ವಿಷಯ ಏನು ಎಂಬುದನ್ನು ನನ್ನ ಕಛೇರಿಗೆ ಬಂದು ತಿಳಿಸಿದರೆ ಅದನ್ನು ನೋಡುತ್ತೇನೆ,

Taking up some Notice Etc.,

ಶ್ರೀ ಪಂಪಾಪತಿ.—ಸ್ವಾಮಿ, ಮೈಸೂರು ಮೆಟಿಲ್ ವರ್ಕ್ಸ್ ಕಾರ್ಮಿಕರ ಮೇಲೆ ಲಾಟಿ ಛಾರ್ಜ್ ಮಾಡಿದ್ದಾರೆ, ಅನೇಕ ಜನರನ್ನು ಜೈಲಿಗೆ ಹಾಕಿದ್ದಾರೆ.....

ಅಧ್ಯಕ್ಷರು.— ಸ್ವಾಮಿ, ನಾನು ಆಗಲೇ ಹೇಳಿದಂತೆ ಈ ಸದನದ ಎಲ್ಲ ಮಾನ್ಯ ಸದಸ್ಯರೂ ಒಂದೇ ಸಾರಿ ಕಾಲಿಂಗ್ ಅಟೆನ್‌ಷನ್, ರೂಲ್ ೩೧೨, ಎಲ್ಲಾ ಕಳುಹಿಸಿದರೆ ಸರ್ಕಾರದವರೂ ಒಟ್ಟಿಗೆ ಎಲ್ಲಕ್ಕೂ ಒಂದೇ ಸಾರಿ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ? ಸಭೆಯ ಕಾರ್ಯಕಲಾಪಗಳನ್ನು ನಡೆಸುವುದೇ ಬೇಡವೆ?

ಶ್ರೀ ಕೆ. ಆರ್. ರಾಜಗೋಪಾಲ್.—ಸ್ವಾಮಿ, ನನ್ನ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿ ೨ ತಿಂಗಳಾಯಿತು ಇದುವರೆಗೂ ನನಗೆ ಉತ್ತರವೇ ಬರಲಿಲ್ಲ. ಈ ಸದನದಲ್ಲಿ ಬಾಯಿ ಇರುವವರಿಗೆ ಉತ್ತರ ಬರುತ್ತದೆ, ಬಾಯಿ ಇಲ್ಲದವರಿಗೆ ಉತ್ತರವೇ ಬರುವುದಿಲ್ಲ.